# MS – 053

-17-

## IV Semester B.C.A. Examination, May/June 2014
## (Fresh and Repeaters) (2012-13 and Onwards)
## ಕನ್ನಡ ಭಾಷೆ – IV
## ಸಾಹಿತ್ಯ ಸಲ್ಲಾಪ - ೨

ST. CLARET COLLEGE LIBRARY

Time : 3 Hours                                                                 Max. Marks : 100

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : (5×1=5)

1) 'ತನ್ನಯ ನಂದನರು ನೂರ್ವರಿಗೆ ಕಿರಿಯಳನಿಂದು ಮುಖಿ ದುಶ್ಶಳೆ' – ಈ ವಾಕ್ಯವನ್ನು ಹೊಸಗನ್ನಡದಲ್ಲಿ ಬರೆಯಿರಿ.

2) 'ಇಂದು ನಮ್ಮ ಬದುಕು ಹಲವು ಭಾಷೆಗಳಿಂದ ಆವೃತವಾಗಿವೆ' – ಈ ವಾಕ್ಯದ ವಚನದೋಷ ಸರಿಪಡಿಸಿ ಬರೆಯಿರಿ.

3) 'ನಾನು ಚೆನ್ನಾಗಿ ಓದಿ ಮುಂದೆ ದೊಡ್ಡ ಮನುಷ್ಯನಾಗಬೇಕು ಅಂದುಕೊಂಡಿದ್ದೇನೆ ' – ಈ ವಾಕ್ಯದ ಲಿಂಗ ಬದಲಿಸಿ ಬರೆಯಿರಿ.

4) ರಾಮನು ಮನೆಯಿಂದ ಬಂದನು – ಈ ವಾಕ್ಯದಲ್ಲಿನ ವಿಭಕ್ತಿ ಪ್ರತ್ಯಯವನ್ನು ಬದಲಿಸಿ ಬರೆಯಿರಿ.

5) ನಖಮಾಂಸ ಪ್ರೀತಿ – ಈ ಪದದ ಅರ್ಥವನ್ನು ಬರೆಯಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (5×1=5)

1) ತೌರೂರ ಬುತ್ತಿಗೂ ಸೀಮಂತಕ್ಕೂ ಸಂಬಂಧವುಂಟು – ಈ ವಾಕ್ಯವನ್ನು ಪ್ರಶ್ನಾರ್ಥಕವಾಗಿ ಬರೆಯಿರಿ.

2) ನಮ್ಮಂಥವರಿಗೆ ಈ ಹಳ್ಳೀಲಿ ಉಳಿಗಾಲವಿಲ್ಲಪ್ಪ. ನಮ್ಮ ಜಮೀನೆಲ್ಲಾ ನೀನೇ ತಗೋಪ್ಪಾ – ಇದನ್ನು ಒಂದೇ ವಾಕ್ಯವಾಗಿ ಬರೆಯಿರಿ.

3) ಇಂದಿನ ಶಿಕ್ಷಣ ಮಾತೃಭಾಷೆಯಲ್ಲಿಯೇ ಇರಬೇಕಾದ್ದು ಸರಿಯೇ ? ಈ ವಾಕ್ಯವನ್ನು ಹೇಳಿಕೆಯಾಗಿ ಪರಿವರ್ತಿಸಿ.

4) ಬಡತನ, ಹಾಡುಗಾರ – ಇದೇ ಮಾದರಿಯ ಎರಡು ಪದಗಳನ್ನು ಬರೆಯಿರಿ.

5) ಬಸಲಿಂಗಪ್ಪ ನೀನು ತುಂಬ ಒಳ್ಳೆಯವನು. ಆದದ್ದು ಆದ ಹಾಗೆ ಹೇಳು ಎಂದು ತಿಮ್ಮಪ್ಪ ನುಡಿದರು – ಈ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕಿ ಬರೆಯಿರಿ.

III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **(5×1=5)**

1) 'ಶೋಕದ ಕಡಲು' ಎಂಬ ರೂಪಕದಂತೆ ಮತ್ತೊಂದು ರೂಪಕವನ್ನು ರಚಿಸಿ.

2) 'ಮೂಗುತೂರಿಸು' ಎಂಬ ನುಡಿಗಟ್ಟನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬರೆಯಿರಿ.

3) 'ನಮಗೆ ಅನೇಕ ಕಷ್ಟಗಳು ಬರುತ್ತದೆ' – ಇಲ್ಲಿನ ಕ್ರಿಯಾಪದದ ವಚನ ಬದಲಿಸಿ.

4) ನೀತಿ – ನೈತಿಕತೆ, ನಿಜ – ನೈಜತೆ – ಇದೇ ರೀತಿಯ ಇನ್ನೆರಡು ಸಾಧಿತ ಪದಗಳನ್ನು ಬರೆಯಿರಿ.

5) 'ಅವಸರವೇ ಅಪಘಾತಕ್ಕೆ ಕಾರಣ' – ಇದೇ ರೀತಿಯಲ್ಲಿ ನಿಮ್ಮದೇ ಆದ ಒಂದು ಘೋಷವಾಕ್ಯ ರಚಿಸಿ.

IV. ಈ ಪದ್ಯದ ಅರ್ಥಸಾಧ್ಯತೆಗಳನ್ನು ವಿವರಿಸಿ. **(1×5=5)**

ಅದು ಕೌಶಿಕಗೆ ಮಾತ್ರವಲ್ಲ, ಯುಗ
ಯುಗಗಳಿಂದ ನಮ್ಮನ್ನು ತುಳಿಯುತ್ತ
ಬಂದ ಈ ಸಮಾಜಕ್ಕೆ ಅದು ಕೇವಲ
ಸೀರೆಯಲ್ಲ, ಪ್ರತಿಭಟನೆಯ ಕಿಡಿ.
ದಿಗಂಬರವೆ ದಿವ್ಯಾಂಬರವಾಗಿ ನಿನಗೆ
ಬಿಗಿದ ಕಟ್ಟುಗಳೆಲ್ಲ ಸಡಲಿ ಕಳಚಿ
ಬಿದ್ದವು . . .

V. ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : **(2×6=12)**

ಪಿ. ಲಂಕೇಶ್, ಕುಂತಿ, ಮೂಢನಂಬಿಕೆಗಳು

VI. ಇವುಗಳಲ್ಲಿ ನಾಲ್ಕು ಪ್ರಶ್ನೆಗಳಿಗೆ ಇಪ್ಪತ್ತು ಸಾಲುಗಳಿಗೆ ಮೀರದಂತೆ ಉತ್ತರ ಬರೆಯಿರಿ : **(4×5=20)**

1) ಕುಮಾರವ್ಯಾಸನಲ್ಲಿ ಮೂಡಿಬಂದಿರುವ ಕುಂತಿಯ ಶೋಕದ ತೀವ್ರತೆಯನ್ನು ಕುರಿತು ಬರೆಯಿರಿ.

**ಅಥವಾ**

'ವಿಜ್ಞಾನ ಬರವಣಿಗೆಗೆ ಕನ್ನಡ ಭಾಷೆಯನ್ನು ಬಳಸುವುದೇ ಸೂಕ್ತ' – ಈ ಹೇಳಿಕೆಯನ್ನು 'ಡಿಸೈನರ್ ಬೇಬೀಸ್' ಎಂಬ ಪೂರಕ ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

2) ಅಕ್ಕನು ದಿಗಂಬರೆಯಾಗಿ ಹೋದದ್ದು ಪುರುಷ ಸಮಾಜಕ್ಕೆ ತೋರಿದ ಪ್ರತಿಭಟನೆಯೆ ? ಚರ್ಚಿಸಿ.

**ಅಥವಾ**

ಜಾತಿ ಗರ್ವದಿಂದ ಬಸಲಿಂಗ ಅನುಭವಿಸಿದ ಮಾನಸಿಕ ಯಾತನೆಯನ್ನು ಕುರಿತು ಬರೆಯಿರಿ.

3) ಅವಳಿಯು ಜವಳಿಯನ್ನು ಸಾಯಿಸಲು ಕಾರಣವೇನು ?

**ಅಥವಾ**

ಸಿರಿಸಂಪಿಗೆಯ ವ್ಯಕ್ತಿತ್ವವನ್ನು ಪರಿಚಯ ಮಾಡಿಕೊಡಿ.

4) ಅಂಬೇಡ್ಕರ್ ಅವರ ಸ್ವಾಭಿಮಾನ ಮತ್ತು ನಾಯಕತ್ವದ ಗುಣಗಳನ್ನು ಚರ್ಚಿಸಿ.

**ಅಥವಾ**

'ಮಾತೃದೇವೋಭವ' – ಎನ್ನುವ ನಾಡಿನಲ್ಲಿ ದೈವಗಳೇ ಹೆಣ್ಣುಕೂಸಿಗೆ ಮೃತ್ಯುದೇವತೆಗಳಾಗಿರುವುದು ಹೇಗೆ ? ಚರ್ಚಿಸಿ.

VII. ಈ ಕೆಳಕಂಡ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ವಿವರವಾದ ಉತ್ತರ ಬರೆಯಿರಿ. **(4×12=48)**

1) ಕುಮಾರವ್ಯಾಸನಲ್ಲಿ ಧರ್ಮರಾಯನೂ ಪಂಪನಲ್ಲಿ ಅರ್ಜುನನೂ ಕೊನೆಗೆ ಪಟ್ಟಕ್ಕೆ ಬರುತ್ತಾರೆ. – ಈ ವ್ಯತ್ಯಾಸಕ್ಕೆ ಕಾರಣ ಏನಿರಬಹುದು ? ವಿಶದಪಡಿಸಿ.

**ಅಥವಾ**

ಆಧುನಿಕ ವಿಜ್ಞಾನ – ತಂತ್ರಜ್ಞಾನಗಳು ಆಧುನಿಕ ಸಮಾಜಕ್ಕೆ ಹೇಗೆ ಅನಿವಾರ್ಯವಾಗಿವೆ ? ಚರ್ಚಿಸಿ.

2) ಮೂಢನಂಬಿಕೆಗಳನ್ನು ಹೋಗಲಾಡಿಸಲು ವೈಜ್ಞಾನಿಕ ಚಿಂತನೆ ಅಗತ್ಯವೆ ? ವಿವರಿಸಿ.

**ಅಥವಾ**

ಹಸಿವೆಯ ಚಿತ್ರಣ 'ಕಿವುಡ ನಾಯಿಯಾದ ಪ್ರಸಂಗ' ಕಥೆಯಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿ.

3) ರಾಜಮಾತೆ ತನ್ನ ಮಗನ ಸುಖಕ್ಕಾಗಿ ಪಟ್ಟ ಕಷ್ಟಗಳನ್ನು ವಿವರಿಸಿ.

**ಅಥವಾ**

ಅವಳಿ ಪಾತ್ರವನ್ನು ಪರಿಚಯ ಮಾಡಿಕೊಡಿ.

4) ಅಂಬೇಡ್ಕರ್ ಅವರು ಚೌಡಾರ್ ಕೆರೆಯ ನೀರನ್ನು ಮುಟ್ಟಿದ ಸಂದರ್ಭದ ಐತಿಹಾಸಿಕ ಮಹತ್ವವನ್ನು ಕುರಿತು ಬರೆಯಿರಿ.

**ಅಥವಾ**

ಹರಕೆ ತೀರಿಸುವವರನ್ನು ಕಂಡಾಗ ಲೇಖಕರಿಗೆ ಆದ ಅನುಭವವೇನು ? ವಿವರಿಸಿ.